ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಯಚೂರು

ಸಂ:ಉನಿರಾ/ಮಮಅಇ/ಅಂ.ಕಾ.ಕ/ಹುದ್ದೆ/ಪ್ರಕಟಣೆ/4/2021-22 ದಿನಾಂಕ: 14/03/2022

:: ಅಧಿಸೂಚನೆ ::

ಸರಕಾರದ ಆದೇಶ ಸಂ: ಮಮಅಇ/89/ಐಸಿಡಿ/2014 ದಿನಾಂಕ: 19-04-2014 ಹಾಗೂ ಸಂ: ಡಿಡಬ್ಲ್ಯೂಡಿ/ಐಸಿಡಿ/ಎಎನ್‌ಜಿ-1/44/2017-18 ದಿನಾಂಕ: 13-09-2017 ಸಂ:ಮಮಅಇ/393/ಐಸಿಡಿ/2017 ದಿನಾಂಕ:23-09-2017ರಲ್ಲಿ ತಿಳಿಸಿದ ಮಾರ್ಗಸೂಚಿಗಳಂತೆ ರಾಯಚೂರು ಜಿಲ್ಲೆಯ ವಿವಿಧ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಈ ಕೆಳಕಾಣಿಸಿದ ಗ್ರಾಮಗಳಲ್ಲಿ/ ನಗರ ಪ್ರದೇಶಗಳಲ್ಲಿ ಖಾಲಿ ಇರುವ **ಅಂಗನವಾಡಿ ಕಾರ್ಯಕರ್ತೆಯರ** ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮೂಲಕ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಪ್ರಾರಂಭವಾದ **ದಿನಾಂಕ:** 17-03-2022 ಆಗಿದ್ದು, ಕೊನೆಯ **ದಿನಾಂಕ:** 15-04-2022 ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ತಿಳಿಸಿದೆ ಅಥವಾ ಈ ಕೆಳಗಿನ ಕೋಷ್ಟಕದಲ್ಲಿ ಅವರ ಹೆಸರಿನ ಮುಂದೆ ಕಾಣಿಸಿದ ದೂರವಾಣಿಯನ್ನು ಸಂಪರ್ಕಿಸಲು ತಿಳಿಸಿದೆ.

**ಅರ್ಜಿ ಸಲ್ಲಿಸಲು ಆನ್‌ಲೈನ್ ವಿಳಾಸ: anganwadirecruit.kar.nic.in**

**"ಅಂಗನವಾಡಿ ಕಾರ್ಯಕರ್ತೆಯರ" ಹುದ್ದೆಗಳು ಖಾಲಿ ಇರುವ ಅಂಗನವಾಡಿ ಕೇಂದ್ರಗಳ ವಿವರ ಈ ಕೆಳಗಿನಂತಿದೆ.**

| ಕ್ರ ಸಂ. | ಯೋಜನಾ ವಾರು ಕ್ರಸಂ. | ಶಿಶು ಅಭಿವೃದ್ಧಿ ಯೋಜನೆ ಹೆಸರು | ದೂರವಾಣಿ ಸಂಖ್ಯೆ | ಗ್ರಾಮ ಪಂಚಾಯಿತಿ/ ಪ.ಪಂ/ಪು.ಸ./ನ.ಸ/ ವಾರ್ಡ್ ನಂ., ಹೆಸರು | ಅಂಗನವಾಡಿ ಕೇಂದ್ರದ ಹೆಸರು | ಮೀಸಲಾತಿ | ಆದ್ಯತೆ |
|---|---|---|---|---|---|---|---|
| 1 | 1 | ಲಿಂಗಸುಗೂರು | | ಬೈಯ್ಯಾಪುರ | ಸಜ್ಜಲಗುಡ್ಡ | ಎಸ್.ಟಿ | |
| 2 | 2 | | | ತಲೆಖಾನ್ | ಬುಗ್ಗಲಗುಡ್ಡ | ಇತರೆ | |
| 3 | 3 | ದೇವದುರ್ಗ | 08531-206196 | ಕೊತ್ತದೊಡ್ಡಿ | ಹೊನ್ನಕಾಟಮಳ್ಳಿ-1 | ಇತರೆ | |
| 4 | 4 | | | ಕರಿಗುಡ್ಡ | ಸೀಮೆದೊಡ್ಡಿ (ಮಿನಿ) | ಎಸ್.ಟಿ | |
| 5 | 5 | | | ಆಲ್ಕೋಡ್ | ನಾಮಸಮರದೊಡ್ಡಿ (ಮಿನಿ) | ಎಸ್.ಟಿ | |

**I. ಅಭ್ಯರ್ಥಿಗಳು ಈ ಕೆಳಕಂಡ ಅರ್ಹತೆ ಹೊಂದಿರಬೇಕು ::**

1] ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಲು 18 ರಿಂದ 35 (ವಿಕಲಚೇತನರಿಗೆ 10 ವರ್ಷ ವಯೋಮಿತಿ ಸಡಲಿಕೆ ಮಾಡಲಾಗಿದೆ.) ವರ್ಷ ವಯೋಮಿತಿಯೊಳಗಿರಬೇಕು. ವಯಸ್ಸಿನ ದೃಢೀಕರಣಕ್ಕಾಗಿ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಮತ್ತು ವರ್ಗಾವಣೆ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

2] ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸುವ ಮಹಿಳೆಯು ಸ್ಥಳೀಯ ಮಹಿಳೆಯಾಗಿರಬೇಕು.

3] ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕ 3 ವರ್ಷದೊಳಗೆ ಸಂಬಂಧ ಪಟ್ಟ ತಹಸೀಲ್ದಾರರಿಂದ/ ಉಪತಹಸೀಲ್ದಾರರಿಂದ ಪಡೆದ ವಾಸಸ್ಥಳದ ಧೃಡೀಕರಣ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

4] ಕರ್ನಾಟಕ ಪರೀಕ್ಷಾ ಮಂಡಳಿ ನಡೆಸುವ ಮುಕ್ತ ಶಾಲೆ/ಮುಕ್ತ ವಿದ್ಯಾಲಯಗಳಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದಾಗ ಪ್ರಥಮ/ದ್ವಿತಿಯ ಭಾಷೆಯಾಗಿ ಕನ್ನಡ ಹಾಗೂ ಸಾಮಾನ್ಯ ಗಣಿತ ಮತ್ತು ಸಮಾಜಶಾಸ್ತ್ರ / ಸಮಾಜ ವಿಜ್ಞಾನ ವಿಷಯಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿರತಕ್ಕದ್ದು. ಪ್ರಮಾಣ ಪತ್ರ / ಅಂಕಪಟ್ಟಿಯು ಗರಿಷ್ಟ 625, ಕನಿಷ್ಟ 219ಅಂಕಗಳನ್ನು ಹೊಂದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಆಯ್ಕೆಗಾಗಿ ಪರಿಗಣಿಸಲಾಗುವುದು.

5] ಒಂದೇ ವಿದ್ಯಾರ್ಹತೆಯುಳ್ಳ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳುಅರ್ಜಿ ಸಲ್ಲಿಸಿದ್ದಲ್ಲಿ ಹೆಚ್ಚು ಅಂಕಗಳಿಸಿದ್ದವರನ್ನು ಆಯ್ಕೆಮಾಡಲಾಗುವದು.

6] ಅಭ್ಯರ್ಥಿಗಳು ಯಾವುದೇ ಭಾಷೆ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದರೂ ಸಹ ಕನ್ನಡ ಭಾಷೆಯನ್ನು ಓದುವ, ಬರೆಯುವ ಮತ್ತು ಮಾತನಾಡುವ ಜ್ಞಾನವಿರಬೇಕು. ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ವ್ಯಾಸಂಗ ಮಾಡಿರಬೇಕು.

7] ಬೇರೆ ರಾಜ್ಯಗಳಲ್ಲಿ ವ್ಯಾಸಂಗ ಮಾಡಿದ್ದು, ಎಸ್.ಎಸ್.ಎಲ್.ಸಿ ಪರೀಕ್ಷೆಗೆ ನಿಗದಿಪಡಿಸಿದ ಗರಿಷ್ಠ ಅಂಕಗಳು ಹಾಗೂ ಕರ್ನಾಟಕ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವದು.

8] ಅಭ್ಯರ್ಥಿಗಳು ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ/ ಜಾತಿಯವರಾಗಿದ್ದಲ್ಲಿ ಜಾತಿಯ ಪ್ರಮಾಣ ಪತ್ರವನ್ನು ತಹಶೀಲ್ದಾರ್ ಇವರಿಂದ ಪಡೆದು ಸಲ್ಲಿಸಬೇಕು.

9] ಅಂಗನವಾಡಿ ಕಾರ್ಯಕರ್ತೆ ಹುದ್ದೆಯಲ್ಲಿ ಅಂಗನವಾಡಿ ಮಕ್ಕಳಿಗೆ ಮತ್ತು ಮಾತೃಪೂರ್ಣ ಯೋಜನೆಯ ಫಲಾನುಭವಿಗಳಿಗೆ ಪೂರಕ ಪೌಷ್ಟಿಕ ಆಹಾರವನ್ನು ಉಣಬಡಿಸಬೇಕಾಗಿರುತ್ತದೆ.

10] ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದಾಗ ಆಯ್ಕೆಯಾಗುವ ಸಂಭವವಿದ್ದಲ್ಲಿ ಆಯ್ಕೆ ಪಟ್ಟಿ ಪ್ರಕಟಿಸುವ ಮುನ್ನ ಚುನಾಯಿತ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ರಾಜೀನಾಮೆ ಅಂಗೀಕೃತ ಪತ್ರ ನೀಡಬೇಕಾಗಿರುವುದು ಕಡ್ಡಾಯ.

**II.**

1]ಬಾಲನ್ಯಾಯ ಕಾಯ್ದೆಯಡಿ ಇಲಾಖೆಯ ಸಂಸ್ಥೆಗಳಲ್ಲಿ ಹಾಗೂ ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ಪಡೆದ ಹಾಲಿ/ಮಾಜಿ ನಿವಾಸಿಗಳಿಗೆ ಆದ್ಯತೆ ನೀಡಲಾಗುವುದು. ಆದರೆ ಸ್ಥಳೀಯರು, ನಿಗದಿತ ವಿದ್ಯಾರ್ಹತೆ ಮತ್ತು ವಯೋಮಿತಿಯೊಳಗೆ ಇರಬೇಕಾಗಿರುವುದು ಕಡ್ಡಾಯ.

2] ಆಸಿಡ್ ದಾಳಿಗೆ ತುತ್ತಾದ ಮಹಿಳೆಯರು ಅರ್ಜಿ ಸಲ್ಲಿಸಿದ್ದಲ್ಲಿ ಆದ್ಯತೆ ಮೇರೆಗೆ ಅವರನ್ನು ಆಯ್ಕೆ ಮಾಡಲಾಗುವುದು. ಆದರೆ ಸ್ಥಳೀಯರು, ನಿಗದಿತ ವಿದ್ಯಾರ್ಹತೆ ವಯೋಮೀತಿಯೊಳಗೆ ಇರಬೇಕಾಗಿರುವುದು ಕಡ್ಡಾಯ.

3] ಮಾಜಿ ದೇವದಾಸಿಯರು, ಯೋಜನಾ ನಿರಾಶ್ರಿತರು, ವಿಚ್ಛೇದಿತ ಮಹಿಳೆಯರು, ಪರಿತ್ಯಕ್ತರು ಅರ್ಜಿ ಸಲ್ಲಿಸಿದ್ದಲ್ಲಿ 5 ಬೋನಸ್ ಅಂಕಗಳಿಗೆ ಅರ್ಹರಾಗಿರುತ್ತಾರೆ.

**III. ವಿಧವೆಯರ ಆಯ್ಕೆ :-**

1] ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ವಿಧವೆಯರು ಅರ್ಜಿ ಸಲ್ಲಿಸಿದಾಗ ಇತರೆ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೆ ನೇರ ವಾಗಿ ವಿಧವೆಯರನ್ನೆ ಆಯ್ಕೆ ಮಾಡಲಾಗುವುದು. ವಿಧವೆ ಅಭ್ಯರ್ಥಿಯು ನಿಗದಿತ ವಿದ್ಯಾರ್ಹತೆ ಉತ್ತೀರ್ಣ ಆಗುವುದು ಕಡ್ಡಾಯ ವಾಗಿರುತ್ತದೆ, ಮತ್ತು ಸ್ಥಳೀಯರು, ವಯೋಮಿತಿಯೊಳಗಿರಬೇಕಾಗಿರುವುದು ಸಹ ಕಡ್ಡಾಯ.

2] ವಿಧವೆಯರಲ್ಲಿ, ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಗೆ (ವಿಧವೆ) ಪ್ರಥಮ ಆದ್ಯತೆ ನೀಡತಕ್ಕದ್ದು.

3] ವಿಧವೆಯರು ತಾವು ಪ್ರಸ್ತುತ ಎಲ್ಲಿ ವಾಸವಿರುವುದಾಗಿ, ವಾಸಸ್ಥಳ ಧೃಡಿಕರಣವನ್ನು ಸಲ್ಲಿಸುತ್ತಾರೇಯೊ ಆ ಸ್ಥಳವನ್ನೇ ಅವರ ವಾಸಸ್ಥಳ ಎಂದು ಪರಿಗಣಿಸಲಾಗುವುದು.

4] ಒಂದೇ ಹುದ್ದೆಗೆ ಇಬ್ಬರು ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ, ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು.

5] ಪ.ಜಾತಿ/ಪ.ಪಂಗಡದವರಿಗೆ ಹುದ್ದೆ ಮೀಸಲಿಟ್ಟ ಕೇಂದ್ರಗಳಲ್ಲಿ ಆ ವರ್ಗಕ್ಕೆ ಸೇರಿದ ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ ಮಾತ್ರ ಅವರನ್ನು ಆಯ್ಕೆ ಮಾಡಲಾಗುವುದು. ಮೀಸಲಿರಿಸಿದ ಅಂಗನವಾಡಿ ಕೇಂದ್ರಗಳ ಹುದ್ದೆಗಳಿಗೆ ಬೇರೆ ವರ್ಗದ ವಿಧವೆಯರು ಅರ್ಜಿ ಸಲ್ಲಿಸಿದ ಪಕ್ಷದಲ್ಲಿ ಅರ್ಜಿಯನ್ನು ಪರಿಗಣಿಸುವುದಿಲ್ಲ.

**IV. ಅಂಗವಿಕಲರ ಆಯ್ಕೆ :-**

1] ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅಂಗವಿಕಲರು ಅರ್ಜಿ ಸಲ್ಲಿಸಿದಾಗ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೆ ನೇರವಾಗಿ ಅಂಗವಿಕಲರನ್ನೇ ಆಯ್ಕೆ ಮಾಡಲಾಗುವುದು. ಅಂಗವಿಕಲ ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರುವುದು, ಸ್ಥಳೀಯರು ಮತ್ತು 45 ವಯೋಮಿತಿಯೊಳಗಿರಬೇಕಾಗಿರುವುದು ಸಹ ಕಡ್ಡಾಯ.

2] ಅಂಗವಿಕಲರು ಪ್ರಸ್ತುತ ತಾವು ಎಲ್ಲಿ ವಾಸವಾಗಿರುವುದಾಗಿ ವಾಸಸ್ಥಳ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೋ ಆ ಸ್ಥಳವನ್ನೇ ಅವರ ವಾಸಸ್ಥಳವೆಂದು ಪರಿಗಣಿಸಲಾಗುವುದು.

3] ಕಿವುಡರೂ, ಮೂಕರು, ಕುರುಡರು, ಮತ್ತು ಬುದ್ಧಿಮಾಂದ್ಯರು, ಮಾನಸಿಕ ಅಸ್ವಸ್ಥರೂ ಇವರು ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

4] ಇತರೆ ದೈಹಿಕ ಶೇಕಡ 60%ಕ್ಕೆ ಮೀರದಂತೆ ಅಂಗವೈಕಲ್ಯ ಉಳ್ಳವರು ಅರ್ಜಿ ಸಲ್ಲಿಸಬಹದಾಗಿದೆ. ಅಂಗಿಕೃತ ಪ್ರಾಧಿಕಾರ (ಜಿಲ್ಲಾ ವೈದ್ಯಕೀಯಾ ಮಂಡಳಿ) ದಿಂದ ಪಡೆದ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

5] ಅಂಗವಿಕಲ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಆ ಅಭ್ಯರ್ಥಿಯನ್ನು ಆಯ್ಕೆ ಸಮಿತಿಯ ಮುಂದೆ ಖುದ್ದು ಹಾಜರಾಗಲು ಸೂಚಿಸಿ ಸದರಿ ಹುದ್ದೆ ನಿರ್ವಹಿಸಲು ಸಮರ್ಥರಿರುವ ಬಗ್ಗೆ ಸಮಿತಿಯೇ ನಿರ್ಧರಿಸಲಾಗುವುದು.

6] ಒಂದೇ ಹುದ್ದೆಗೆ ಇಬ್ಬರು ಅಂಗವಿಕಲರು ಅರ್ಜಿ ಸಲ್ಲಿಸಿದ್ದಲ್ಲಿ, ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು.

7] ಒಂದು ವೇಳೆ ಒಂದೇ ಕೇಂದ್ರಕ್ಕೆ ಆಸಿಡ್ ದಾಳಿಗೆ ತುತ್ತಾದ ಮಹಿಳೆಯರು, ಬಾಲನ್ಯಾಯ ಕಾಯ್ದೆಯಡಿ ಇಲಾಖೆಯ ಸಂಸ್ಥೆಗಳಲ್ಲಿ ಹಾಗೂ ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ಪಡೆದ ಹಾಲಿ/ಮಾಜಿ ನಿವಾಸಿಗಳು, ವಿಧವೆಯರು ಹಾಗೂ ಅಂಗವಿಕಲರು ಅರ್ಜಿ ಸಲ್ಲಿಸಿದ್ದಲ್ಲಿ ಆಸಿಡ್ ದಾಳಿಗೆ ತುತ್ತಾದ ಮಹಿಳೆಯರಿಗೆ ಪ್ರಥಮ ಆದ್ಯತೆ,ಇಲಾಖೆಯ ಸಂಸ್ಥೆಗಳು ಹಾಗೂ ರಾಜ್ಯ ಮಹಿಳಾ ನಿಲಯಗಳಲ್ಲಿ ಹಾಲಿ/ಮಾಜಿ ನಿವಾಸಿಗಳಿಗೆ ಎರಡನೇ ಆದ್ಯತೆ, ವಿಧವೆಯರಿಗೆ ಮೂರನೇ ಆದ್ಯತೆ ಹಾಗೂ ಅಂಗವಿಕಲರಿಗೆ ನಾಲ್ಕನೇ ಆದ್ಯತೆ ನೀಡಲಾಗುವುದು. ಆದರೆ ಸ್ಥಳೀಯರು, ನಿಗದಿತ ವಿದ್ಯಾರ್ಹತೆ ಮತ್ತು ವಯೋಮಿತಿಯೊಳಗೆ ಇರಬೇಕಾಗಿರುವುದು ಕಡ್ಡಾಯ.

## V.ವಿಶೇಷ ಸೂಚನೆ:-

1]ಹುದ್ದೆ ಖಾಲಿ ಇರುವ ಕೇಂದ್ರದ ಗ್ರಾಮದವರನ್ನು ಹೊರತುಪಡಿಸಿ ಬೇರೆ ಗ್ರಾಮದವರಿಗೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಹಾಗೂ ನಗರ ಪ್ರದೇಶದಲ್ಲಿ ಹುದ್ದೆ ಖಾಲಿ ಇರುವ ವಾರ್ಡಿನವರನ್ನು ಹೊರತುಪಡಿಸಿ ಬೇರೆ ವಾರ್ಡಿನವರಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ನಗರ ಪ್ರದೇಶದಲ್ಲಿ ಖಾಲಿ ಇರುವ ಅಂಗನವಾಡಿ ಕೇಂದ್ರದ ಪ್ರದೇಶದ ಹೆಸರು ವಾಸಸ್ಥಳ ಪ್ರಮಾಣ ಪತ್ರದಲ್ಲಿ ಇರುವುದು ಕಡ್ಡಾಯ

2] ಅರ್ಜಿಯನ್ನು ಸಲ್ಲಿಸುವ ಕೊನೆಯ **ದಿನಾಂಕ:**______________________

3] **ಅರ್ಜಿ ಸಲ್ಲಿಸುವ Online ವಿಳಾಸ : www.anganwadirecruit.kar.nic.in**

4] ಹೆಚ್ಚಿನ ಮಾಹಿತಿಗಾಗಿ ಕೇಂದ್ರಕ್ಕೆ ಸಂಬಂದಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯಕ್ಕೆ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಲು ತಿಳಿಸಿದೆ.

## VI. ಆನ್-ಲೈನ್ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು

1] ಅರ್ಜಿ ನಿಗದಿತ ನಮೂನೆಯಲ್ಲಿ. (ಆನ್-ಲೈನ್)
2] ಜನನ ಪ್ರಮಾಣ ಪತ್ರ/ಜನ್ಮ ದಿನಾಂಕ ಇರುವ ದಾಖಲೆ.
3] ಎಸ್.ಎಸ್.ಎಲ್.ಸಿ ಅಂಕ ಪಟ್ಟಿ ಮತ್ತು ವರ್ಗಾವಣೆ ಪ್ರಮಾಣ ಪತ್ರ.
4] ತಹಶೀಲ್ದಾರ ಅಥವಾ ಉಪತಹಶೀಲ್ದಾರರಿಂದ ಪಡೆದ 1 ವರ್ಷದೊಳಗಿನ ವಾಸಸ್ಥಳ ಧೃಡಿಕರಣ ಪತ್ರ.
5] ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ.
6] ಪತಿಯ ಮರಣ ಪ್ರಮಾಣ ಪತ್ರ.(ವಿಧವಾ ವೇತನದ ಧೃಢೀಕರಣವನ್ನು ಪರಿಗಣಿಸುವಂತಿಲ್ಲ).
7] ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ ಎಂದು ಉಪವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
8] ಅಂಗವಿಕಲತೆ ಪ್ರಮಾಣ ಪತ್ರ (ಅಂಗವಿಕಲ ವೇತನದ ಧೃಢೀಕರಣವನ್ನ ಪರಿಗಣಿಸುವಂತಿಲ್ಲ).
9] ವಿಚ್ಛೇದನ ಪ್ರಮಾಣ ಪತ್ರ. (ನ್ಯಾಯಲಯದಿಂದ ಪಡೆದಿರಬೇಕು).
10] ಮಾಜಿ ದೇವದಾಸಿ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ
11] ಪರಿತ್ಯಕ್ತೆ ಬಗ್ಗೆ ಗ್ರಾಮ ಪಂಚಾಯಿತಿಯಿಂದ ಪಡೆದ ಪ್ರಮಾಣ ಪತ್ರ
12] ಸಂಸ್ಥೆ ನಿವಾಸಿ ಬಗ್ಗೆ ಇಲಾಖೆ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ
13] ನಿರಾಶ್ರಿತರು ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ

ಉಪ ನಿರ್ದೇಶಕರು, ಹಾಗೂ ಸದಸ್ಯರು
ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿ
ರಾಯಚೂರು.

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಯಚೂರು

ಸಂ:ಉನಿರಾ/ಮಮಅಇ/ಅಂ.ಸಹಾ/ಹುದ್ದೆ/ಪ್ರಕಟಣೆ/4/2021-22 ದಿನಾಂಕ: 14/03/2022

:: ಅಧಿಸೂಚನೆ ::

ಸರಕಾರದ ಆದೇಶ ಸಂ:ಮಮಅಇ/89/ಐಸಿಡಿ/2014 ದಿನಾಂಕ:19-04-2014 ಹಾಗೂ ಸಂ: ಡಿಡಬ್ಲ್ಯುಡಿ/ಐಸಿಡಿ/ಎಎನ್‌ಜಿ-1/44/2017-18 ದಿನಾಂಕ:13-09-2017 ಸಂ: ಮಮಅಇ/393/ಐಸಿಡಿ/2017 ದಿನಾಂಕ:23-09-2017ರಲ್ಲಿ ತಿಳಿಸಿದ ಮಾರ್ಗಸೂಚಿಗಳಂತೆ ರಾಯಚೂರು ಜಿಲ್ಲೆಯ ವಿವಿಧ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಈ ಕೆಳಕಾಣಿಸಿದ ಗ್ರಾಮಗಳಲ್ಲಿ/ನಗರ ಪ್ರದೇಶಗಳಲ್ಲಿ ಖಾಲಿ ಇರುವ **ಅಂಗನವಾಡಿ ಸಹಾಯಕಿಯರ** ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮೂಲಕ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಪ್ರಾರಂಭವಾದ **ದಿನಾಂಕ:** 17-03-2022 ಆಗಿದ್ದು, ಕೊನೆಯ **ದಿನಾಂಕ:** 16-04-2022 ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ತಿಳಿಸಿದೆ ಅಥವಾ ಈ ಕೆಳಗಿನ ಕೋಷ್ಟಕದಲ್ಲಿ ಅವರ ಹೆಸರಿನ ಮುಂದೆ ಕಾಣಿಸಿದ ದೂರವಾಣಿಯನ್ನು ಸಂಪರ್ಕಿಸಲು ತಿಳಿಸಿದೆ.

**ಅರ್ಜಿ ಸಲ್ಲಿಸಲು ಆನ್‌ಲೈನ್ ವಿಳಾಸ: anganwadirecruit.kar.nic.in**

**"ಅಂಗನವಾಡಿ ಸಹಾಯಕಿಯರ" ಹುದ್ದೆಗಳು ಖಾಲಿ ಇರುವ ಅಂಗನವಾಡಿ ಕೇಂದ್ರಗಳ ವಿವರ ಈ ಕೆಳಗಿನಂತಿದೆ.**

| ಕ್ರ ಸಂ. | ಯೋಜನ ವಾರು ಕ್ರ.ಸಂ. | ಶಿಶು ಅಭಿವೃದ್ಧಿ ಯೋಜನೆ ಹೆಸರು | ದೂರವಾಣಿ ಸಂಖ್ಯೆ | ಗ್ರಾಮ ಪಂಚಾಯಿತಿ/ಪ.ಪಂ/ ಪು.ಸ./ನ.ಸ/ವಾರ್ಡ್ ನಂ. ಹೆಸರು | ಅಂಗನವಾಡಿ ಕೇಂದ್ರದ ಹೆಸರು | ಮೀಸಲಾತಿ | ಆದ್ಯತೆ |
|---|---|---|---|---|---|---|---|
| 1 | 1 | ರಾಯಚೂರು | 08532-235630 | ಯಾಪಲದಿನ್ನಿ | ವಡ್ಡೆಪಲ್ಲಿ-1 | ಎಸ್.ಟಿ | |
| 2 | 2 | | | ಯಾಪಲದಿನ್ನಿ | ಅಪ್ಪನದೊಡ್ಡಿ-1 | ಇತರೆ | |
| 3 | 3 | | | ಆತ್ಕೂರು | ಡಿ.ರಾಂಪೂರ-3 | ಇತರೆ | |
| 4 | 4 | | | ಮಮದಾಪೂರು | ಆಶಾಪೂರು-1 | ಇತರೆ | |
| 5 | 5 | | | ಮಮದಾಪೂರು | ಆಶಾಪೂರು-2 | ಎಸ್.ಸಿ. | |
| 6 | 6 | | | ವಾರ್ಡ್-02 | ಜನತಾ ಕಾಲೋನಿ-1 | ಇತರೆ | |
| 7 | 7 | | | ವಾರ್ಡ್ ನಂ-35 | ರಾಂಪೂರು-7 | ಎಸ್.ಸಿ. | |
| 8 | 8 | | | ವಾರ್ಡ್ ನಂ-18 | ಖಾದರಗುಂಡಾ-2 | ಇತರೆ | |
| 9 | 9 | | | ಆತ್ಕೂರು | ಆತ್ಕೂರು-1 | ಎಸ್.ಸಿ. | |
| 10 | 10 | | | ವಾರ್ಡ್ ನಂ-10 | ಬೇರೂನ್‌ಕಿಲ್ಲಾ-4 | ಇತರೆ | |
| 11 | 11 | ಗಿಲ್ಲೇಸುಗೂರು | 08532-235630 | ಯದ್ಲಾಪೂರು | ಗಂಜಳ್ಳಿ-1 | ಇತರೆ | |
| 12 | 12 | | | ಚಿಕ್ಕೆಸುಗೂರು | ಚಿಕ್ಕೆಸುಗೂರು-1 | ಇತರೆ | |
| 13 | 13 | | | ವಾರ್ಡ್-34 | ಯಕ್ಲಾಸ್‌ಪೂರು-2 | ಎಸ್.ಸಿ. | |
| 14 | 14 | | | ಮನ್ಸಲಾಪೂರು | ಮನ್ಸಲಾಪೂರು-1 | ಎಸ್.ಟಿ. | |
| 15 | 15 | | | ಚಿಕ್ಕಸುಗೂರು | ಏಗನೂರು-1 | ಇತರೆ | |
| 16 | 16 | ಮಾನವಿ | 08538-220438 | ಕುರ್ಡಿ | ಕುರ್ಡಿ-2 | ಇತರೆ | |
| 17 | 17 | | | ಗೋರ್ಕಲ್ | ಆಲ್ದೂರು-1 | ಇತರೆ | |
| 18 | 18 | | | ವಾರ್ಡ್ ನಂ-13 | ನಾಯಕವಾಡಿ | ಇತರೆ | |
| 19 | 19 | ಸಿರವಾರ | 08538-220438 | ಪ.ಪಂ.ವಾರ್ಡ್-13 | ಸಿರವಾರ-21 | ಇತರೆ | |
| 20 | 20 | | | ಪಟಕನದೊಡ್ಡಿ | ಮಲ್ಲಟ | ಎಸ್.ಟಿ | |

| ಕ್ರ. ಸಂ. | ಯೋಜನ ವಾರು ಕ್ರ.ಸಂ. | ಶಿಶು ಅಭಿವೃದ್ಧಿ ಯೋಜನೆ ಹೆಸರು | ದೂರವಾಣಿ ಸಂಖ್ಯೆ | ಗ್ರಾಮ ಪಂಚಾಯಿತಿ/ ಪ.ಪಂ/ಪು.ಸ./ನ.ಸ/ ವಾರ್ಡ್ ನಂ., ಹೆಸರು | ಅಂಗನವಾಡಿ ಕೇಂದ್ರದ ಹೆಸರು | ಮೀಸಲಾತಿ | ಆದ್ಯತೆ |
|---|---|---|---|---|---|---|---|
| 21 | 21 | ಸಿಂಧನೂರು | 08535–221043 | ರಾಗಲಪರ್ವಿ | ರಾಗಲಪರ್ವಿ–1 | ಎಸ್.ಟಿ. | |
| 22 | 22 | | | ರಾಗಲಪರ್ವಿ | ಪುಲದಿನ್ನಿ–2 | ಎಸ್.ಟಿ. | |
| 23 | 23 | ತುರವಿಹಾಳ | 08535–221043 | ಗೋರೆಬಾಳ | ಬಾಳೆಗಿಡಕ್ಯಾಂಪ್ | ಇತರೆ | |
| 24 | 24 | | | ಪಗಡದಿನ್ನಿ | ಮುಳ್ಳೂರು ಇ.ಜೆ–2 | ಇತರೆ | |
| 25 | 25 | ಲಿಂಗಸುಗೂರು | 08532–257257 | ಮುದುಗಲ್(ಪು) | ಮೇಗಳಪೇಟೆ–1 | ಇತರೆ | |
| 26 | 26 | | | ಮುದುಗಲ್(ಪು) | ಮುತ್ಯಾನ ದರ್ಗಾ | ಇತರೆ | |
| 27 | 27 | | | ಬಯ್ಯಾಪೂರು | ಸಜ್ಜಲಗುಡ್ಡ | ಎಸ್.ಟಿ | |
| 28 | 28 | | | ಅಡವಿಬಾವಿ ತಾಂಡ | ನೀರಲೂಟಿ | ಇತರೆ | |
| 29 | 29 | | | ಸರ್ಜಾಪೂರ | ಚಿಕ್ಕಹೆಸರೂರು–1 | ಇತರೆ | |
| 30 | 30 | ದೇವದುರ್ಗ | 08531–206196 | ಕೆ ಇರಬಗೇರಾ | ಸಾಸ್ವಿಗೇರಾ | ಎಸ್.ಸಿ | |
| 31 | 31 | | | ಆಲ್ಕೋಡ್ | ಆಲ್ಕೋಡ್ ತಾಂಡ | ಎಸ್.ಸಿ | |
| 32 | 32 | | | ಹಿರೇಬೂದುರು | ಹಿರೇರಾಯಕುಂಪಿ–1 | ಎಸ್.ಟಿ | |
| 33 | 33 | | | ಹೇಮನಾಳ | ಹೇಮನಾಳ–1 | ಎಸ್.ಸಿ | |
| 34 | 34 | | | ಪಲಕನಮರಡಿ | ಮೂಡಲಗುಂಡ | ಎಸ್.ಟಿ | |
| 35 | 35 | | | ಹೆಚ್.ಸಿದ್ದಾಪೂರು | ಬೊಮ್ಮನಹಳ್ಳಿ–1 | ಎಸ್.ಟಿ | |
| 36 | 36 | | | ಭೂಮನಗುಂಡ | ಜನತಾಕಾಲೋನಿ ಮಲ್ಲಾಪೂರ | ಎಸ್.ಟಿ | |

**I. ಅಭ್ಯರ್ಥಿಗಳು ಈ ಕೆಳಕಂಡ ಅರ್ಹತೆ ಹೊಂದಿರಬೇಕು ::**

1] ಅಂಗನವಾಡಿ ಸಹಾಯಕಿ ಹುದ್ದೆಗೆ ಅರ್ಜಿ ಸಲ್ಲಿಸಲು 18 ರಿಂದ 35 ವರ್ಷ ವಯೋಮಿತಿಯೊಳಗಿರಬೇಕು.

2] ಅಂಗನವಾಡಿ ಸಹಾಯಕಿ ಹುದ್ದೆಗೆ ಅರ್ಜಿ ಸಲ್ಲಿಸುವ ಮಹಿಳೆಯು ಸ್ಥಳೀಯ ಮಹಿಳೆಯಾಗಿರಬೇಕು.

3] ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ದಿನಾಂಕದಿಂದ 3 ವರ್ಷದೊಳಗಿನ ಸಂಬಂಧ ಪಟ್ಟ ತಹಶೀಲ್ದಾರ/ ಉಪತಹಶೀಲ್ದಾರರಿಂದ ಪಡೆದ ಮೂಲ ವಾಸಸ್ಥಳದ ದೃಢೀಕರಣ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

4] ಅಭ್ಯರ್ಥಿಗಳು ಕನಿಷ್ಠ 4ನೇ ತರಗತಿ ಉತ್ತೀರ್ಣರಾಗಿಅರಬೇಕು. ಗರಿಷ್ಟ 9ನೇ ತರಗತಿ ತೇರ್ಗಡೆಯಾಗಿರಬೇಕು. ಇದರಲ್ಲಿ ಹೆಚ್ಚಿನ ವಿದ್ಯಾರ್ಹತೆಯುಳ್ಳವರನ್ನು ಆಯ್ಕೆ ಮಾಡಲಾಗುವುದು 9ನೇ ತರಗತಿಗಿಂತ ಹೆಚ್ಚಿನ ವಿದ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸುವುದಿಲ್ಲ.

5] ಒಂದೇ ವಿದ್ಯಾರ್ಹತೆಯುಳ್ಳ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಲ್ಲಿ ಹೆಚ್ಚು ಅಂಕ ಗಳಿಸಿದ್ದವರನ್ನು ಆಯ್ಕೆಮಾಡಲಾಗುವದು.

6] ಅಭ್ಯರ್ಥಿಗಳು ಯಾವುದೇ ಭಾಷೆ ಮಾದ್ಯಮದಲ್ಲಿ ವ್ಯಾಸಂಗ ಮಾಡಿದ್ದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದರೂ ಸಹ ಕನ್ನಡ ಭಾಷೆಯನ್ನು ಓದುವ, ಬರೆಯುವ ಮತ್ತು ಮಾತನಾಡುವ ಜ್ಞಾನವಿರಬೇಕು.ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ವ್ಯಾಸಂಗ ಮಾಡಿರಬೇಕು.

7] ಅಭ್ಯರ್ಥಿಗಳು ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡ/ ಜಾತಿಯವರಾಗಿದ್ದಲ್ಲಿ ಜಾತಿಯ ಪ್ರಮಾಣ ಪತ್ರವನ್ನು ತಹಶೀಲ್ದಾರ ಇವರಿಂದ ಪಡೆದು ಸಲ್ಲಿಸಬೇಕು.

8] ಅಂಗನವಾಡಿ ಸಹಾಯಕಿ ಹುದ್ದೆಯಲ್ಲಿ ಅಂಗನವಾಡಿ ಮಕ್ಕಳಿಗೆ ಮತ್ತು ಮಾತೃಪೂರ್ಣ ಯೋಜನೆಯ ಫಲಾನುಭವಿಗಳಿಗೆ ಪೂರಕ ಪೌಷ್ಠಿಕ ಆಹಾರವನ್ನು ಬೇಯಿಸಿ/ಸಿದ್ದಪಡಿಸಿ ಉಣಬಡಿಸಬೇಕಾಗಿರುತ್ತದೆ. ಮತ್ತು ಕೇಂದ್ರವನ್ನು ಶುಚಿಗೊಳಿಸಬೇಕಾಗಿರುತ್ತದೆ ಹಾಗೂ ಮಕ್ಕಳನ್ನು ಅವರ ಮನೆಗಳಿಂದ ಕೇಂದ್ರಕ್ಕೆ ಕರೆತರುವ ಕೆಲಸ ನಿರ್ವಹಿಸಬೇಕು. ಕಾರ್ಯಕರ್ತೆಯು ಸಭೆಗಳಿಗೆ ಮತ್ತು ಮನೆ ಭೇಟಿಗೆ ಹೋದಾಗ ತಾತ್ಕಾಲಿಕವಾಗಿ ಕೇಂದ್ರವನ್ನು ನಿರ್ವಹಿಸಬೇಕು. ಆದಕಾರಣ ಸಹಾಯಕಿ ಹುದ್ದೆಗೆ ಅಂಗವಿಕಲ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

9] ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಸಹಾಯಕಿ ಹುದ್ದೆಗೆ ಅರ್ಜಿ ಸಲ್ಲಿಸಿದಾಗ ಆಯ್ಕೆಯಾಗುವ ಸಂಭವವಿದ್ದಲ್ಲಿ ಆಯ್ಕೆ ಪಟ್ಟಿ ಪ್ರಕಟಿಸುವ ಮುನ್ನ ಚುನಾಯಿತ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ರಾಜೀನಾಮೆ ಅಂಗೀಕೃತ ಪತ್ರ ನೀಡಬೇಕಾಗಿರುವುದು ಕಡ್ಡಾಯ.

**II.** 1]ಬಾಲನ್ಯಾಯ ಕಾಯ್ದೆಯಡಿ ಇಲಾಖೆಯ ಸಂಸ್ಥೆಗಳಲ್ಲಿ ಹಾಗೂ ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ಪಡೆದ ಹಾಲಿ/ಮಾಜಿ ನಿವಾಸಿಗಳಿಗೆ ಅದ್ಯತೆ ನೀಡಲಾಗುವುದು. ಆದರೆ ಸ್ಥಳೀಯರು, ನಿಗದಿತ ವಿದ್ಯಾರ್ಹತೆ ಮತ್ತು ವಯೋಮಿತಿಯೊಳಗೆ ಇರಬೇಕಾಗಿರುವುದು ಕಡ್ಡಾಯ.

2] ಆಸಿಡ್ ದಾಳಿಗೆ ತುತ್ತಾದ ಮಹಿಳೆಯರು ಅರ್ಜಿ ಸಲ್ಲಿಸಿದ್ದಲ್ಲಿ ಅದ್ಯತೆ ಮೇರೆಗೆ ಅವರನ್ನು ಆಯ್ಕೆ ಮಾಡಲಾಗುವುದು. ಆದರೆ ಸ್ಥಳೀಯರು, ನಿಗದಿತ ವಿದ್ಯಾರ್ಹತೆ ವಯೋಮೀತಿಯೊಳಗೆ ಇರಬೇಕಾಗಿರುವುದು ಕಡ್ಡಾಯ.

3] ಮಾಜಿ ದೇವದಾಸಿಯರು, ಯೋಜನಾ ನಿರಾಶ್ರಿತರು, ವಿಚ್ಛೇದಿತ ಮಹಿಳೆಯರು, ಪರಿತ್ಯಕ್ತರು ಅರ್ಜಿ ಸಲ್ಲಿಸಿದ್ದಲ್ಲಿ 5 ಬೋನಸ್ ಅಂಕಗಳಿಗೆ ಅರ್ಹರಾಗಿರುತ್ತಾರೆ.

**III. ವಿಧವೆಯರ ಆಯ್ಕೆ :-**

1] ಅಂಗನವಾಡಿ ಸಹಾಯಕಿಯರ ಹುದ್ದೆಗೆ ವಿಧವೆಯರು ಅರ್ಜಿ ಸಲ್ಲಿಸಿದಾಗ ಇತರೆ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೆ ನೇರವಾಗಿ ವಿಧವೆಯರನ್ನೆ ಆಯ್ಕೆ ಮಾಡಲಾಗುವುದು. ವಿಧವೆ ಅಭ್ಯರ್ಥಿಯು ನಿಗದಿತ ವಿದ್ಯಾರ್ಹತೆ ಉತ್ತೀರ್ಣ ಆಗುವುದು ಕಡ್ಡಾಯವಾಗಿರುತ್ತದೆ, ಮತ್ತು ಸ್ಥಳೀಯರು ವಯೋಮಿತಿಯೊಳಗಿರಬೇಕಾಗಿರುವುದು ಸಹ ಕಡ್ಡಾಯ.

2] ವಿಧವೆಯರಲ್ಲಿ, ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಗೆ (ವಿಧವೆ) ಪ್ರಥಮ ಆದ್ಯತೆ ನೀಡತಕ್ಕದ್ದು.

3] ವಿಧವೆಯರು ತಾವು ಪ್ರಸ್ತುತ ಎಲ್ಲಿ ವಾಸವಿರುವುದಾಗಿ, ವಾಸಸ್ಥಳ ಧೃಡಿಕರಣವನ್ನು ಸಲ್ಲಿಸುತ್ತಾರೇಯೊ ಆ ಸ್ಥಳವನ್ನೇ ಅವರ ವಾಸಸ್ಥಳ ಎಂದು ಪರಿಗಣಿಸಲಾಗುವುದು.

4] ಒಂದೇ ಹುದ್ದೆಗೆ ಇಬ್ಬರು ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ, ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು.

5] ಪ.ಜಾತಿ/ಪ.ಪಂಗಡದವರಿಗೆ ಹುದ್ದೆ ಮೀಸಲಿಟ್ಟ ಕೇಂದ್ರಗಳಲ್ಲಿ ಆ ವರ್ಗಕ್ಕೆ ಸೇರಿದ ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ ಮಾತ್ರ ಅವರನ್ನು ಆಯ್ಕೆ ಮಾಡಲಾಗುವುದು. ಮೀಸಲಿರಿಸಿದ ಅಂಗನವಾಡಿ ಕೇಂದ್ರಗಳ ಹುದ್ದೆಗಳಿಗೆ ಬೇರೆ ವರ್ಗದ ವಿಧವೆಯರು ಅರ್ಜಿ ಸಲ್ಲಿಸಿದ ಪಕ್ಷದಲ್ಲಿ ಅರ್ಜಿಯನ್ನು ಪರಿಗಣಿಸುವುದಿಲ್ಲ.

**IV. ವಿಶೇಷ ಸೂಚನೆ:-**

1] ಹುದ್ದೆ ಖಾಲಿ ಇರುವ ಕೇಂದ್ರದ ಗ್ರಾಮದವರನ್ನು ಹೊರತುಪಡಿಸಿ ಬೇರೆ ಗ್ರಾಮದವರಿಗೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಹಾಗೂ ನಗರ ಪ್ರದೇಶದಲ್ಲಿ ಹುದ್ದೆ ಖಾಲಿ ಇರುವ ವಾರ್ಡಿನವರನ್ನು ಹೊರತುಪಡಿಸಿ ಬೇರೆ ವಾರ್ಡಿನವರಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. 'ನಗರ ಪ್ರದೇಶದಲ್ಲಿ ಖಾಲಿ ಇರುವ ಅಂಗನವಾಡಿ ಕೇಂದ್ರದ ಪ್ರದೇಶದ ಹೆಸರು ವಾಸಸ್ಥಳ ಪ್ರಮಾಣ ಪತ್ರದಲ್ಲಿ ಇರುವುದು ಕಡ್ಡಾಯ

2] ಅರ್ಜಿಯನ್ನು ಸಲ್ಲಿಸುವ ಕೊನೆಯ **ದಿನಾಂಕ:**____________________

3] **ಅರ್ಜಿ ಸಲ್ಲಿಸುವ** Online **ವಿಳಾಸ :** www.anganwadirecruit.kar.nic.in

4] ಹೆಚ್ಚಿನ ಮಾಹಿತಿಗಾಗಿ ಕೇಂದ್ರಕ್ಕೆ ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯಕ್ಕೆ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಲು ತಿಳಿಸಿದೆ.

**V. ಆನ್-ಲೈನ್ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು**

1] ಅರ್ಜಿ ನಿಗದಿತ ನಮೂನೆಯಲ್ಲಿ.(ಆನ್-ಲೈನ್)
2] ಜನನ ಪ್ರಮಾಣ ಪತ್ರ/ಜನ್ಮ ದಿನಾಂಕ ಇರುವ ದಾಖಲೆ.
3] ಅಂಕ ಪಟ್ಟಿ ಮತ್ತು ವರ್ಗಾವಣೆ ಪ್ರಮಾಣ ಪತ್ರ.
4] ತಹಶೀಲ್ದಾರ ಅಥವಾ ಉಪತಹಶೀಲ್ದಾರರಿಂದ ಪಡೆದ 1 ವರ್ಷದೊಳಗಿನ ವಾಸಸ್ಥಳ ಧೃಢಿಕರಣ ಪತ್ರ.
5] ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ.
6] ಪತಿಯ ಮರಣ ಪ್ರಮಾಣ ಪತ್ರ.(ವಿಧವಾ ವೇತನದ ಧೃಢೀಕರಣವನ್ನು ಪರಿಗಣಿಸುವಂತಿಲ್ಲ).
7] ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ ಎಂದು ಉಪವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
8] ವಿಚ್ಛೇದನ ಪ್ರಮಾಣ ಪತ್ರ. (ನ್ಯಾಯಲಯದಿಂದ ಪಡೆದಿರಬೇಕು).
9] ಮಾಜಿ ದೇವದಾಸಿ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ
10] ಪರಿತ್ಯಕ್ತೆ ಬಗ್ಗೆ ಗ್ರಾಮ ಪಂಚಾಯಿತಿಯಿಂದ ಪಡೆದ ಪ್ರಮಾಣ ಪತ್ರ
11] ಸಂಸ್ಥೆ ನಿವಾಸಿ ಬಗ್ಗೆ ಇಲಾಖೆ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ
12] ನಿರಾಶ್ರಿತರು ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ.

ಉಪ ನಿರ್ದೇಶಕರು,ಹಾಗೂ ಸದಸ್ಯರು
ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿ
ರಾಯಚೂರು.